"ನೋಡು, ಡ್ಯಾಡಿ ಮಲಕ್ಕೊಂಡಾರ. ಅವರಿಗೆ ರೆಸ್ಟ್ ಬೇಕಾಗೇತಿ. ತಿಳಿತಿಲ್ಲೋ?"

ಅಪ್ಪನಿಗೆ ನಿದ್ದೆ ಬೇಕಾಗಿದೆ! ನನಗೆ ಮಾತಾಡುವುದು ಬೇಕಾಗಿದೆ!

''ಮಮ್ಮಿ ಕೇಳಿಲ್ಲಿ. ಅಪ್ಪಗ ಡಿಸ್ಟರ್ಬ್ ಆಗಲಾರದಂಗ ಮಲಕೋಬೇಕಾಗೇತಿ, ಹೌದಲ್ಲೋ? ಹಂಗಿದ್ರ ಅಂವಗ ತನ್ನ ಕೋಣೆಗೆ ಹೋಗಿ ಮಲಗಲಿಕ್ಕೆ ಹೇಳು. ನಾ ಹೆಂಗ ನನ್ನ ರೂಮಿನೊಳಗ ಮಲಗತೇನೋ ಹಂಗ ಅಂವನೂ ತನ್ನ ರೂಮಿನೊಳಗ ಯಾಕ ಮಲಗಬಾರದು? ಸುಮ್ಮಸುಮ್ಮನ ಬಂದು ನಿನ್ನ ಬೆಡ್ ಮ್ಯಾಲ ಯಾಕ ಮಲಕೋಬೇಕು?''

ನನ್ನ ಮಾತು ಅವ್ವನ ಎದೆಗೆ ನಾಟಿದಂತೆ ಅನಿಸಿತು. ಅವಳು ತುಸು ವ್ಯಗ್ರಳಾದಳು. "ನೋಡು ಪುಟ್ಟಾ, ನಿನಗ ಅಗದೀ ಸ್ಟ್ರಿಕ್ಟ್ ಆಗಿ ಹೇಳಲಿಕ್ಕೆ ಹತ್ತೇನಿ. ನೀನು ನನ್ನ ಹತ್ತಿರ ಮಲಕೋದಾದ್ರ ಸುಮ್ಮನ ಏನೂ ಮಾತನಾಡಲಾರದಂಗ ಮಲಗಬೇಕು. ಇಲ್ಲಾ ಸುಮ್ಮನ ನಿನ್ನ ರೂಮಿಗೆ ಹೋಗಿಬಿಡು. ತಿಳಿತೇನು?" ಅವ್ವ ನನ್ನನ್ನು ಹೊರಗೆ ಕಳಿಸುತ್ತಿದ್ದಾಳೆಂದ ಮೇಲೆ ಆತನೂ ಎಚ್ಚರಗೊಂಡು ಅವನ ಮನಃಶಾಂತಿಯೂ ತುಸು ಕದಡಲಿ! ನಾನು ಅಪ್ಪನಿಗೆ ಗುದ್ದಿದ್ದು ಅವ್ವನಿಗೆ ತಿಳಿಯಲಿಲ್ಲ. ಅವನು ನೋವಿನಿಂದ 'ಹಾಂ!' ಎಂದು ಕಣ್ಣು ತೆರೆದ.

''ಆಗಲೇ ಬೆಳಕಾತು?'' ಆತ ಸಿಡುಕಿನಿಂದ ಕೇಳಿದ.

"ಇನ್ನೂ ಪೂರ್ಣ ಬೆಳಕಾಗಿಲ್ಲ. ನೀವು ಇನ್ನೂ ಸ್ವಲ್ಪ ಹೊತ್ತು ಮಲಕ್ಕೊಳ್ರಿ. ಅದೇ ಲ್ಯಾರಿ ಗದ್ದಲ ಇರೋದಲ್ಲ? ಏಯ್, ಪುಟ್ಟ, ನಡೀ ನೀನು ನಿನ್ನ ಕ್ವಾಣೆಗೆ ಹೋಗು. ನೋಡಲ್ಲಿ, ಸುಮ್ಮಸುಮ್ಮನ ಡ್ಯಾಡಿಗೆ ಎಚ್ಚರ ಮಾಡಿದೀ. ಅವರು ದಣಿದು ಮಕ್ಕೊಂಡಿದ್ರು..." ಅವ್ವ ಹಾಗೆ ಹೇಳುತ್ತ ನನ್ನನ್ನು ಅನಾಮತ್ತಾಗಿ ಎತ್ತಿಕೊಂಡು ಅವಳ ಬೆಡ್‌ರೂಮಿನಿಂದ ಹೊರಗೆ ಹೊರಟಳು. ನಾನು ಒಮ್ಮೆಲೆ ಚೀರಿದೆ. ಹೋರಾಟ ಮಾಡದಿದ್ದರೆ ಯಾರೂ ನಮ್ಮತ್ತ ಕಣ್ಣೆತ್ತಿ ನೋಡುವುದಿಲ್ಲ. ನನ್ನ ವಿಚಿತ್ರ ಚೀರುವಿಕೆಗೆ ಸತ್ತವರೂ ಏಳಬೇಕಿತ್ತು! ಇನ್ನು ಅಪ್ಪ ಏಳುವುದಂತೂ ಸಾಮಾನ್ಯದ ಮಾತು!

ಅವನಿಗೆ ಇನ್ನಿಲ್ಲದ ಕೋಪ ಬಂದಿತ್ತು. ಆತ ಚೀರಿದ: "ಈ ಹುಡುಗ ಹುಟ್ಟಿದ ಮ್ಯಾಲ ಎಂದಾದರೂ ಮಲಗ್ಯಾನೋ, ಇಲ್ಲೋ? ದೇವರೆ, ಇಂವನ ಕಣ್ಣೊಳಗ ಸ್ವಲ್ಪ ನಿದ್ದಿ ಅನ್ನೋದನ್ನ ಹಾಕಿಯೋ ಇಲ್ಲೋ ಅಂತೇನಿ ನಾನು..."

"ಅಲ್ಲಾರೀ, ಅದು ಇನ್ನೂ ಮಗು. ತನಗ ನಿದ್ದೀ ಬಂದಾಗ ಮಲಗತದ. ಸ್ವಲ್ಪ ಸಪ್ಪಳಾದ್ರೂ ಸಾಕು, ಎಚ್ಚರಾಗತದ."

ಅವ್ವ ಅಪ್ಪನನ್ನು ರಮಿಸಲೆಂಬಂತೆ, ನನ್ನನ್ನು ಒಂದು ರೀತಿಯಿಂದ ಬೈದಂತೆ ಮಾಡುತ್ತ ಎತ್ತಿಕೊಂಡು ಹೊರಟಳು. ಬಾಗಿಲು ತೆಗೆಯಲೆಂದು ಅವಳು ನನ್ನನ್ನು ತನ್ನ ತೋಳಿನಿಂದ ಇಳಿಸಿದಾಗ ನಾನು ಬದಗ್ಗನೆ ಓಡಿಹೋಗಿ ಮೂಲೆಯಲ್ಲಿ ನಿಂತು ಮತ್ತೂ ಜೋರಾಗಿ ಚೀರತೊಡಗಿದೆ. ಅಪ್ಪ ಒಮ್ಮಿಂದೊಮ್ಮೆಲೆ ಎದ್ದು ಕುಳಿತು ಮತ್ತಷ್ಟು ಜೋರಾಗಿ ಚೀರಿದ: ''ಏಯ್ ಬಾಯ್ಮುಚ್ಚೋ. ಅತ್ತರೆ ನಿನ್ನ ಬಾಯಿ ಮ್ಯಾಲ ಹೊಡಿತೇನಿ, ನೋಡು.''

ಇದುವರೆಗೂ ಯಾರೂ ನನಗೆ ಹೀಗೆ, ಇಷ್ಟು ಒರಟಾಗಿ ಬೈದಿರಲಿಲ್ಲ. ಅವನು ಹಾಗೆ ಅಂದಿದ್ದಕ್ಕೆ ಏಕದಂ ನನ್ನ ಅಳು ಬಂದಾಯಿತು. ಜೊತೆಗೆ ಸಿಟ್ಟೂ ಬಂದಿತು. ನಾನೂ ತಿರುಗಿ ಅಂದೆ: ''ನೀನೂ ಬಾಯ್ಮುಚ್ಚು.'' ಅವನ ಶಬ್ದವಿಶೇಷಣಗಳನ್ನು ಅವನಿಗೆ ಹಿಂತಿರುಗಿಸತೊಡಗಿದೆ. ಮಿಲಿಟರಿ ಮನುಷ್ಯನಾಗಿದ್ದ ಅವನು ಸಣ್ಣ ಮಕ್ಕಳ ಇಂತಹ ಅಶಿಸ್ತನ್ನು ಸಹಿಸಿಕೊಳ್ಳುವನೆ? ಅವ್ವನ ಮೇಲೆ ರೇಗಿದ. ಸನ್ನಿವೇಶ ಅತಿರೇಕಕ್ಕೆ ಹೋಗುತ್ತಿರುವುದನ್ನು ಗಮನಿಸಿದ ತಾಯಿ ನನ್ನನ್ನು ಕರೆದುಕೊಂಡು ಹೊರಗೆ ಬಂದಳು.

ಅಂದಿನಿಂದ ನನ್ನ ಜೀವನವೇ ನರಕವಾಯಿತು. ನಾನು ಮತ್ತು ಅಪ್ಪ ಬದ್ಧ ವೈರಿಗಳಾದೆವು.